# ಇಟಲಿ ಮೂಲದ ಶೆಫ್‌ಗೆ ದೀಪಾವಳಿ ಪುಳಕ



ಇಟಲಿಯಿಂದ ಬಂದ ವಿಟ್ಟೋರಿಯೊ–ಬಾರ್ಬರ ದಂಪತಿ

ಸಾಮಾನ್ಯವಾಗಿ ವಿದೇಶಗಳಿಂದ ಬೆಂಗಳೂರಿಗೆ ಬಂದಿರುವ ಜನ ಈ ಊರನ್ನು ಬಹಳ ಪ್ರೀತಿಸಲು ಕಾರಣ ಇಲ್ಲಿನ ಹವಾಮಾನ, ಅನುಕೂಲಕರವಾದ ಔದ್ಯೋಗಿಕ ವಾತಾವರಣ, ರುಚಿಕರವಾದ ತಿಂಡಿ ತಿನಿಸು, ವಾರಾಂತ್ಯ ಕಳೆಯಲು ಸೊಗಸಾದ ಮೋಜಿನ ತಾಣಗಳು, ಮೇಲಾಗಿ ಅವರಂತೆಯೇ ಬೇರೆ ಬೇರೆ ದೇಶಗಳಿಂದ ಬಂದು ನೆಲೆ ನಿಂತ 'ಎಕ್ಸ್‌ಪಾಟ್'ಗಳು. ಹೀಗಾಗಿ ಬಹುತೇಕ ವಿದೇಶೀಯರಿಗೆ ಬೆಂಗಳೂರು ಬಹುಬೇಗನೆ 'ಹೋಮ್‌ಟೌನ್' ಎನಿಸಿ ಬಿಡುತ್ತದೆ.

ಇಟಲಿಯಿಂದ ಬೆಂಗಳೂರಿಗೆ ಬಂದ ವಿಟ್ಟೋರಿಯೊ ಗ್ರೇಕೊ– ಬಾರ್ಬರ ದಂಪತಿಗಳಿಗೆ ಕೂಡ ಬೆಂಗಳೂರು ವಾಸ ಬಹಳ ಇಷ್ಟವಾಗಿದೆ. ಇಲ್ಲಿಗೆ ಬರುವುದಕ್ಕೂ ಮುನ್ನ ಈ ದಂಪತಿ ಆಸ್ಟ್ರೇಲಿಯಾದಲ್ಲಿದ್ದರು. ವಿಟ್ಟೋರಿಯೊ ಇಲ್ಲಿನ ಪಂಚತಾರಾ ಹೋಟೆಲ್ ಒಂದರಲ್ಲಿ ಮಾಸ್ಟರ್ ಶೆಫ್ ಆಗಿ ಕೆಲಸ ಮಾಡುತ್ತಿದ್ದಾರೆ.

'ಬೆಂಗಳೂರಿನಲ್ಲಿ ದಿನ ನಿತ್ಯ ಏನಾದರೊಂದು ಹೊಸತನ್ನು ಕಲಿಯುವುದಿರುತ್ತದೆ. ಹೀಗಾಗಿ ಇಲ್ಲಿ ಜೀವನ ನಡೆಸುವುದು ದಿನ ನದಿನವೂ ಹೊಸ ಅನುಭವ ನೀಡುತ್ತಿದೆ' ಎನ್ನುತ್ತಾರೆ ಗ್ರೇಕೊ.

ಆಸ್ಟ್ರೇಲಿಯಾದಲ್ಲಿ ಸುಮಾರು 9 ವರ್ಷಗಳ ಕಾಲ ಶೆಫ್ ಆಗಿ ಕೆಲಸ ಮಾಡಿದ ಇವರಿಗೆ ಅಲ್ಲಿ ಭಾರತೀಯ ಸ್ನೇಹಿತರು ಬಹಳ ಮಂದಿ ಇದ್ದರಂತೆ. ಹೀಗಾಗಿ ಭಾರತೀಯ ಸಂಸ್ಕೃತಿ, ಆಹಾರ ಪದ್ಧತಿಗಳ ಪರಿಚಯ ಆಗಲೇ ಆಗಿತ್ತಂತೆ. ಬೆಂಗಳೂರಿಗೆ ಬಂದು ಕೆಲವೇ ತಿಂಗಳುಗಳಲ್ಲಿ ಸರಿಯಾಗಿ ಹೊಂದಿ ಕೊಂಡರಂತೆ. ಇದೀಗ ಎರಡು ವರ್ಷಗಳಾಗಿವೆ.

'ಇಲ್ಲಿ ಶೆಫ್ ಆಗಿ ಸೇರಿದಾಗ ಇಲ್ಲಿನ ಜನ ಇಟಾಲಿಯನ್ ಅಡುಗೆ ಇಷ್ಟಪಡುತ್ತಾರೋ ಇಲ್ಲವೋ ಎಂಬ ಅನುಮಾನ ಇತ್ತು. ಆದರೂ ನನಗೆ ಗೊತ್ತಿರುವ ಹೊಸ ಹೊಸ ಅಡುಗೆಗಳನ್ನು ಪ್ರಯೋಗ ಮಾಡಿದೆ. ಜನ ಇಷ್ಟಪಟ್ಟು ತಿಂದರು. ಅಲ್ಲಿಂದ ಧೈರ್ಯ ಬಂತು' ಎಂದು ಬೆಂಗಳೂರಿನಲ್ಲಿ ಆರಂಭದ ವೃತ್ತಿ ಜೀವನವನ್ನು ನೆನಪಿಸಿಕೊಳ್ಳುತ್ತಾರೆ ವಿಟ್ಟೋರಿಯೊ.

'ನಾನು ಕೆಲಸ ಮಾಡುವ ಕಡೆ ಬಹಳಷ್ಟು ಸ್ನೇಹಿತರಿದ್ದಾರೆ. ಯುವ ಜನರ ಶಕ್ತಿ, ಸಾಮರ್ಥ್ಯ ಅಂತೂ ಅಗಾಧವಾದದ್ದು. ಮೇಲಾಗಿ ಕೆಲಸದ ಹುಮ್ಮಸ್ಸು ಮೆಚ್ಚುವಂಥದ್ದು. ಇದು ಇಲ್ಲಿನ ವೃತ್ತಿ ಜೀವನಕ್ಕೆ ಹೆಚ್ಚಿನ ಪ್ರೇರಣೆ ನೀಡುತ್ತಿದೆ. ಸಹೋದ್ಯೋಗಿಗಳಲ್ಲಿ ಹೊಸದನ್ನು ಕಲಿಯುವ ತುಡಿತ ಇದೆ. ಹೀಗಾಗಿ ವೃತ್ತಿಯನ್ನು ಬಹಳ ಎಂಜಾಯ್ ಮಾಡ್ತೀನಿ' ಎನ್ನುತ್ತಾರೆ ಈ ಶೆಫ್.

'ಇಲ್ಲಿನ ಹವಾಮಾನ ಚೆನ್ನಾಗಿದೆ. ನಾನು ಚೆನ್ನೈ, ಕೋಲ್ಕತ್ತಾ, ದೆಹಲಿ ಮುಂತಾದ ಕಡೆಗಳಿಗೆ ಹೋಗಿದ್ದೇನೆ. ಅಲ್ಲಿಗಿಂತ ಇಲ್ಲಿನ ವಾತಾವರಣವೇ ಬಹಳ ಹಿಡಿಸಿದೆ. ಆದರೆ ಟ್ರಾಫಿಕ್ ವ್ಯವಸ್ಥೆ ಮಾತ್ರ ಬಹಳ ಹದಗೆಟ್ಟಿದೆ. ಜನದಟ್ಟಣೆ ಹೆಚ್ಚಾಗಿದೆ. ರಸ್ತೆಯಲ್ಲಿ ಓಡಾಡುವುದಕ್ಕೆ ಬೇಸರವಾಗುತ್ತದೆ. ವಾರದ ಎಲ್ಲ ದಿನಗಳಲ್ಲಿ, ಎಲ್ಲ ಸಮಯದಲ್ಲೂ ಟ್ರಾಫಿಕ್ ಮಾತ್ರ ಬಹಳ ಕಿರಿಕಿರಿಯಾಗುತ್ತದೆ' ಎನ್ನುತ್ತಾರೆ ಇವರು.

'ಬೆಂಗಳೂರಿನಲ್ಲಿ ಟಿಪ್ಪುವಿನ ಅರಮನೆ, ಲಾಲ್‌ಬಾಗ್ ಕಬ್ಬನ್ ಪಾರ್ಕ್ ನೋಡಿದ್ದೇವೆ. ರಸ್ಸೆಲ್ ಮಾರ್ಕೆಟ್, ಜಾನ್ಸನ್ ಮಾರ್ಕೆಟ್‌ಗಳಲ್ಲಿ ಅಡ್ಡಾಡುತ್ತೇವೆ. ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಶಾಪಿಂಗ್ ಮಾಡ್ತೇವೆ ಎನ್ನುವ ವಿಟ್ಟೋರಿಯೊ, ಬೆಂಗಳೂರಿಗೆ ಬಂದ ಹೊಸದರಲ್ಲಿ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಮನೆ ಮಾಡಿದ್ದೆವು. ಆಮೇಲೆ ಬೇರೆಡೆ ಶಿಫ್ಟ್ ಮಾಡಿದ್ವಿ. ಈಗ ಮತ್ತೆ ಎಚ್‌ಎಸ್‌ಆರ್‌ನಲ್ಲೇ ವಾಸವಾಗಿದ್ದೀವಿ' ಎನ್ನುತ್ತಾರೆ. ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುವ ನಗರ ಎಂಬುದು ಇವರ ಅಭಿಪ್ರಾಯ.

'ಆಸ್ಟ್ರೇಲಿಯಾದಲ್ಲಿರುವಾಗಲೇ ಭಾರತೀಯ ಆಹಾರ ಪದ್ಧತಿ ಬಗ್ಗೆ ಚೆನ್ನಾಗಿ ತಿಳಿದಿತ್ತು. ಹೆಚ್ಚಿನ ಅಡುಗೆಗಳ ರುಚಿಯನ್ನೂ ನೋಡಿದ್ದೇನೆ. ಇಲ್ಲಿಗೆ ಬಂದ ಮೇಲೆ ಆಹಾರ ಕ್ರಮದ ಬಗ್ಗೆ ಯಾವುದೇ ವ್ಯತ್ಯಾಸ ಗೊತ್ತಾಗಲಿಲ್ಲ. ಆದರೂ ಇಲ್ಲಿನ ಸಲಾಡ್ ಬಹಳ ಇಷ್ಟಪಡುತ್ತೇನೆ' ಎನ್ನುತ್ತಾರೆ ಅವರು.

## ಹಬ್ಬಗಳ ಆಚರಣೆ

'ಇಲ್ಲಿ ಹಬ್ಬಗಳ ಆಚರಣೆ ವಿಶಿಷ್ಟ ಅನುಭವ ನೀಡುತ್ತದೆ. ಗಣೇಶನ ಹಬ್ಬ, ದಸರಾ, ಹೋಲಿ, ಓಣಂ.. ಎಲ್ಲಕ್ಕಿಂತ ಹೆಚ್ಚು ಪುಳಕ ಕೊಡುವ ಹಬ್ಬ ಎಂದರೆ ದೀಪಾವಳಿ. ಬೆಳಕಿನ ಹಬ್ಬವನ್ನು ಬಹಳ ಪ್ರೀತಿಸುತ್ತೇವೆ, ಪಟಾಕಿಯ ಸದ್ದು, ಸಿಹಿ ತಿಂಡಿಗಳ ವಿನಿಮಯ, ಹೊಸ ಬಟ್ಟೆ ಧರಿಸಿ ಸಂಭ್ರಮ ಪಡುವುದು ನೋಡಿದರೆ ನಾವೂ ಭಾಗಿಯಾಗಬೇಕು ಎಂಬ ಆಸೆ ಮೂಡುತ್ತದೆ. ಬೆಂಗಳೂರು ಬಿಟ್ಟು ಮತ್ತೆ ಇಟಲಿಗೆ ಹೋಗುವ ಯೋಚನೆ ಸದ್ಯಕ್ಕಿಲ್ಲ ಎನ್ನುವ ವಿಟ್ಟೋರಿಯೊ, ತಮ್ಮ ಹತ್ತಿರದವರು, ಬಂಧು ಬಳಗ ಇಟಲಿಯಲ್ಲಿ ಇರುವುದರಿಂದ ವರ್ಷಕ್ಕೆ ಒಂದೆರಡು ಬಾರಿ ಹೋಗಿ ಬರುತ್ತೇವೆ' ಎನ್ನುತ್ತಾರೆ.

★ **ಅವನೀಶ್**